

# ಒಲವಿನ ಮಲ್ಲಿಗೆ ಕ್ರೌರ್ಯದ ಸುಡುಧಗೆ

**ಪ್ರೇಮದ ಹೂವಿನ ಜೊತೆಗೇ ಇರುವ ಕ್ರೌರ್ಯದ ಮುಳ್ಳು ಏನೆಲ್ಲ ಅನಾಹುತ ಮಾಡಬಹುದು ಎಂಬುದನ್ನು ಈ ಕಿರುಚಿತ್ರ ಒಂದು ಕ್ರೈಮ್ ಕಥೆಯ ಮೂಲಕ ಹೇಳುತ್ತದೆ.**

■ ಗೌರಿ

ಅದೊಂದು ಮುದ್ದಾದ ಜೋಡಿ. ಗಂಡ ಆಟೋರಿಕ್ಷಾ ಓಡಿಸುತ್ತಾನೆ. ಹೆಂಡತಿ ಮನೆಗೆಲಸಕ್ಕೆ ಹೋಗುತ್ತಾಳೆ. ಜೋಪಡಿಯಂಥ ಮನೆಯಲ್ಲಿಯೇ ಇದ್ದರೂ ಮನೆ ತುಂಬಿ ತುಳುಕುವಷ್ಟು ಒಲವು. ಬೇಂದ್ರೆ ಬರೆದ 'ಹಂಚಿಕೊಳುವೆವದನೇ ನಾವು ಅದಕು ಇದಕು ಎದಕೂ' ಎಂಬ ಸಾಲುಗಳನ್ನೇ ಜೀವಿಸುತ್ತಿರುವ ಜೋಡಿ ಅದು. ಸದಾ ಹೆಂಡತಿಯ ಮಡಿಲಲ್ಲಿಯೇ ಇರಲು ಬಯಸುವ ಗಂಡ. ಗಂಡನ ಈ ರಸಿಕತನವನ್ನು ಇನ್ನಷ್ಟು ಭುಗಿಲೇಳಿಸುವಂಥ ಹೆಂಡತಿ. ಸಂಜೆ ಎಷ್ಟೇ ಕಷ್ಟವಾದರೂ ಹೆಂಡತಿಗೆ ಒಂದು ಮೊಳ ಮಲ್ಲಿಗೆ ತರಲು ಅವನು ಮರೆಯುವುದಿಲ್ಲ. ಅವನು ಮುಡಿಸುವ ಮಲ್ಲಿಗೆಗಾಗಿ ಅವಳೂ ಕಣ್ಣಲ್ಲಿ ಕಾತರ ತುಂಬಿಕೊಂಡು ಕಾಯುತ್ತಿರುತ್ತಾಳೆ.

ಆದರೆ ಅವನಿಗೆ ಇರುವ ಒಂದೇ ಒಂದು ವ್ಯಸನವೆಂದರೆ ಮದ್ಯಪಾನ. ಸಂಜೆ ಕುಡಿದುಕೊಂಡೇ ಮನೆಗೆ ಬರುತ್ತಾನೆ. ಹೆಂಡತಿಗೆ ಇದನ್ನು ಕಂಡರೆ ವಿಪರೀತ ಕೋಪ. 'ಕಷ್ಟಪಟ್ಟು ದುಡಿದಿದ್ದೆಲ್ಲವನ್ನೂ ಕುಡಿದು ಹಾಳು ಮಾಡಿದರೆ ಬದುಕು ಕಟ್ಟಿಕೊಳ್ಳುವುದು ಹೇಗೆ?' ಎಂಬ ದುಗುಡ ಅವಳದ್ದು. ಅದನ್ನು ಕೇಳಿದರೆ ಗಂಡನಿಂದ ಒದೆತಗಳು ಬೀಳುತ್ತವೆ.

ಹೀಗೆ ಬೆಳಿಗ್ಗೆ ಸ್ವರ್ಗದ ತುಣುಕಾಗಿಯೂ ಸಂಜೆ ನರಕದ ತುಂಡಾಗಿಯೂ ಎರಡು ರೀತಿಯ ಬದುಕನ್ನು ಬದುಕುತ್ತಿರುವವರು ಅವರು. ಇಂಥ ದಂಪತಿಗಳ ಮಧ್ಯ ನಡೆಯುವ ಒಂದು ಘಟನೆ ಅವರ ಬದುಕನ್ನೇ ಅಲ್ಲಾಡಿಸಿಬಿಡುತ್ತದೆ, ಅಲ್ಲೋಲಕಲ್ಲೋಲ ಮಾಡಿಬಿಡುತ್ತದೆ. ಅಮಲಿನಲ್ಲಿ, ಕೋಪದಲ್ಲಿ ಗಂಡ ತನ್ನ ಬದುಕಿಗೆ ತಾನೇ ಕೊಳ್ಳಿಯಿಟ್ಟುಕೊಳ್ಳುತ್ತಾನೆ.



**ಹೆಸರು:** ಪ್ರೇಮ್ ಗಜ್ರಾ ಔರ್ ಚಿಲ್ಲಿ ಚಿಕನ್
**ನಿರ್ದೇಶನ:** ಶರದ ಕುಲಕರ್ಣಿ
**ನಿರ್ಮಾಣ:** ಪ್ರತೀಕ್ ಚಕ್ರವರ್ತಿ
**ಸಂಗೀತ:** ರಾಜು ಸಿಂಗ್
**ಛಾಯಾಗ್ರಹಣ:** ಅಶ್ವಿನ್ ಪ್ರಭಾಕರ್
**ಸಂಕಲನ:** ಗಂಗಾ ಕಚರ್ಲಾ
**ತಾರಾಗಣ:** ವೃಷಾಲಿ ಚಾವನ್, ವಿಜಯ್ ಕಶ್ಯಪ್

ಹೀಗೆ ಕೆಳಮಧ್ಯಮವರ್ಗದ ಬದುಕಿನ ಕಥೆಗೆ ಕ್ರೈಮ್‌ನ ಎಳೆಯನ್ನು ಸೇರಿಸಿ ಕಿರುಚಿತ್ರದ ಫ್ರೇಮ್ ಹಾಕಿದ್ದಾರೆ ಶರದ ಕುಲಕರ್ಣಿ. ನಟರಾಗಿ ಗುರ್ತಿಸಿಕೊಂಡಿದ್ದು, ಶರದ ಅವರ ನಿರ್ದೇಶನದ ಮೊದಲ ಪ್ರಯತ್ನವಿದು. ಜನಪ್ರಿಯ ಧಾಟಿಯಲ್ಲಿಯೇ ಸಾಗುತ್ತದೆ. ಒಂದು ಹಂತದ ನಂತರ ಕ್ಲೈಮ್ಯಾಕ್ಸ್ ಅನ್ನು ಊಹಿಸಿಕೊಳ್ಳುವುದೂ ಸಾಧ್ಯ. ಯಾಕೆಂದರೆ ಇಂಥ ಹಲವು ಪ್ರಯತ್ನಗಳು ಈಗಾಗಲೇ ಬಂದಿವೆ. ಆದರೂ ಕಿರುಚಿತ್ರದ ಸಣ್ಣ ಕ್ಯಾನ್ವಾಸ್‌ನಲ್ಲಿ ನೋಡಿಸಿಕೊಂಡು ಹೋಗುವ ಗುಣದ ಚಿತ್ರಕಟ್ಟಲು ಅವರಿಗೆ ಸಾಧ್ಯವಾಗಿದೆ.

ಕಥೆ ಹೇಳುವುದೇ ಮುಖ್ಯ ಉದ್ದೇಶವಾಗಿಟ್ಟುಕೊಂಡಿರುವ ಅವರಿಗೆ ಆ ಕಥೆಯನ್ನು ಒಂದು ಸಾವಯವ ವಾತಾವರಣದಲ್ಲಿ ಬೆಳೆಸಲು ಸಾಧ್ಯವಾಗಿಲ್ಲ. ಮುಖ್ಯಪಾತ್ರಗಳು ವಾಸಿಸುವ ಮನೆ, ಆಟೋರಿಕ್ಷಾ ಸುತ್ತಾಡುವ ಜಾಗ, ಚಿಲ್ಲಿ ಚಿಕನ್, ಹೂಗಳನ್ನು ಕೊಳ್ಳುವ ಸ್ಥಳ ಎಲ್ಲವನ್ನೂ ತೋರಿಸುತ್ತಾರಾದರೂ ಅವೆಲ್ಲವೂ ಇಲ್ಲಿ ಒಂದು ಟೂಲ್ ಆಗಿ ಬಳಕೆಯಾಗಿವೆಯೇ ಹೊರತು ಒಟ್ಟಾರೆ ಒಂದು ವಾತಾವರಣ ಕಟ್ಟಿಕೊಡಲು ಪೂರಕವಾಗಿಲ್ಲ. ಅವನು ರಸಿಕ ಎಂದು ತೋರಿಸಲು ಹೆಂಡತಿಯ ಜೊತೆಗಿನ ಮುದ್ದಾಟದ ದೃಶ್ಯ, ರಸಿಕನಾದರೂ ಲಂಪಟನಲ್ಲ ಎಂದು ತೋರಿಸಲು ಆಟೋರಿಕ್ಷಾದಲ್ಲಿ ಮುದುಕನ ಜೊತೆಗೆ ನಡೆಯುವ ಸಂಭಾಷಣೆ, ಹೀಗೆ ಹಲವು ದೃಶ್ಯಗಳು ಒಂದು ಉದ್ದೇಶಕ್ಕಷ್ಟೇ ನಿಂತುಬಿಡುತ್ತವೆ. ಹಾಗಾಗಿಯೇ ಅವರು ವಾಸಿಸುವ ಮನೆಯ ಆಚೀಚೆ ಮನೆಯವರೂ ಇಲ್ಲಿ ಕಾಣಿಸುವುದಿಲ್ಲ. ಎಲ್ಲಿ ನಡೆಯುತ್ತದೆ ಎಂದು ಊಹಿಸಲು ಸಾಧ್ಯವಿಲ್ಲ.

ಆದರೆ ಶರದ ಅವರಿಗೆ ಕಥೆ ಹೇಳುವ ಕೌಶಲವಿದೆ ಎನ್ನುವುದಕ್ಕೆ ಈ ಕಿರುಚಿತ್ರ ಖಂಡಿತ ಹಲವು ಪುರಾವೆಗಳನ್ನು ನೀಡುತ್ತದೆ. ಅವರು ಅದನ್ನು ಇನ್ನಷ್ಟು ಹರಿತಗೊಳಿಸಿಕೊಂಡರೆ ಉತ್ತಮ ಸಿನಿಮಾ ನಿರ್ದೇಶಿಸಬಲ್ಲರು.

ಈ ಕಿರುಚಿತ್ರ ವೀಕ್ಷಣೆಗೆ bit.ly/3oZ2e3I ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.